<u>**ಸಾಕ್ಷಿಯನ್ನು ದಿನಾಂಕಃ 28.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್.ಆರ್.ಕೆ. ವಕೀಲರಿಂದಃ**</u>

ವಾದಿಯು ಏನು ಬೇಡಿ ದಾವೆ ಮಾಡಿರುತ್ತಾರೆಂದು ಗೊತ್ತಾ ಎಂದರೆ ಸಾಕ್ಷಿಯು ದಾವಾ ಆಸ್ತಿಗೆ ತೊಂದರೆ ಕೊಡುತ್ತಿದ್ದೇವೆಂದು ದಾವೆ ಹೂಡಿರುತ್ತಾರೆಂದು ನುಡಿಯುತ್ತಾರೆ. ತಮ್ಮ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಇರುವ ಅಂಶಗಳನ್ನು ತಾವು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನೇ ಹೇಳಿ ಬರೆಸಿರುತ್ತೇನೆಂದು ನುಡಿಯುತ್ತಾರೆ. ನಾನು 2 ನೇ ಪ್ರತಿವಾದಿಯ ಪರವಾಗಿಯೂ ಸಾಕ್ಷ್ಯ ನುಡಿಯುತ್ತಿದ್ದೇನೆ. ವಾದಿಯು ದಾವಾ ಸ.ನಂ. ಆಸ್ತಿಗಳನ್ನು ಎಂ.ಸಿ. ಅಶ್ವತ್ ಕುಮಾರ್, ಸೀತಾರಾಮ್ ಮತ್ತು ಶ್ರೀನಿವಾಸ ಮೂರ್ತಿರವರುಗಳಿಂದ ದಿನಾಂಕಃ 11.07.2019 ರಂದು ಕ್ರಯದ ಮೂಲಕ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿಯು ಸೀತಾರಾಮ್ ರವರು ನನ್ನ ಹೆಸರಿಗೆ ಸ.ನಂ. 89/4 ರ 02 ಎಕರೆ ವಿಸ್ತೀರ್ಣವನ್ನು ದಿನಾಂಕಃ 10.06.2006 ರಂದು ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ವಾದಿಯು ದಿನಾಂಕಃ 11.07.2019 ರಂದು ದಾವಾ ಸ.ನಂ. ಆಸ್ತಿಗಳನ್ನು ಖರೀದಿ ಮಾಡಿದ ನಂತರ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿಯು ಖಾತೆ ಮಾಡದಂತೆ ನಾನು ತಾಲ್ಲೋಕು ದಂಡಾಧಿಕಾರಿ, ಉಪ-ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ಕಛೇರಿಗೆ ತಕರಾರು ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ದಿನಾಂಕಃ 10.06.2006 ರಂದು ಕ್ರಯದ ಕರಾರು ಮಾಡಿಕೊಟ್ಟಿರುತ್ತಾರೆಂದು ಹೇಳಿದ್ದು, ಸದರಿ ಕ್ರಯ ಕರಾರು ಪತ್ರವನ್ನು ತಾವು ನೋಂದಾವಣಿ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ನೋಂದಾವಣಿ ಮಾಡಿಸಿಲ್ಲ ನೋಂದಾವಣಿ ಮಾಡಿಸಲು ಸೀತಾರಾಮ್ ರವರನ್ನು ಕರೆದಾಗ ಆಗ ಬರುತ್ತೇನೆ, ಈಗ

ಬರುತ್ತೇನೆಂದು ಕಾಲ ತಳ್ಳಿರುತ್ತಾರೆಂದು ನುಡಿಯುತ್ತಾರೆ. ನಿಮ್ಮ ವಕೀಲರ ಮೂಲಕ ತಾವು ಸೀತಾರಾಮ್ ರವರಿಗೆ ನೋಟೀಸ್ ಏನಾದರೂ ಕೊಡಿಸಿರುತ್ತೀರಾ ಎಂದರೆ ಕೊಡಿಸಿರುತ್ತೇನೆಂದು ನುಡಿಯುತ್ತಾರೆ. ಕ್ರಯ ಕರಾರು ಪತ್ರವನ್ನು ತಾವು ನ್ಯಾಯಾಲಯಕ್ಕೆ ಈ ಕೇಸಿನಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ದಾವಾ ಷೆಡ್ಯೂಲ್ ನಲ್ಲಿ ವಾದಿಯು ಸ್ವಾಧೀನ ಇದ್ದಾರೆಂದರೆ ಸಾಕ್ಷಿಯು ನಾನು ಸ್ವಾಧೀನ ಇದ್ದೇನೆಂದು ನುಡಿಯುತ್ತಾರೆ. ದಾವಾ ಆಸ್ತಿಯ ಸ.ನಂ. ಪಹಣಿಯಲ್ಲಿ ವ್ಯವಸಾಯಗಾರರ ಕಲಂನಲ್ಲಿ ತಮ್ಮ ಹೆಸರು ನಮೂದು ಇದೆಯೇ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ವಾದಿಯ ಹೆಸರಿಗೆ ದಾವಾ ಆಸ್ತಿಯ ಕ್ರಯ ಪತ್ರ ಮಾಡಿಕೊಡುವ ಮೊದಲು ದಾವಾ ಆಸ್ತಿಯಲ್ಲಿ ಸೀತಾರಾಮ್ ಮತ್ತು ಆತನ ಕುಟುಂಬಸ್ಥರೇ ಸ್ವಾಧೀನ ಇದ್ದರು ಎಂದರೆ ಸಾಕ್ಷಿಯು ತಾನೇ ಸ್ವಾಧೀನ ಇದ್ದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದೇನೆಂದು ತಾವು ಹೇಳಿದ್ದು ಪ್ರಸ್ತುತ ಏನು ಬೆಳೆ ಬೆಳೆದಿದ್ದೀರಿ ಎಂದರೆ ಸಾಕ್ಷಿಯು ಹುರುಳಿ ಬೆಳೆ ಬೆಳೆದಿದ್ದೇನೆಂದು ನುಡಿಯುತ್ತಾರೆ. ಹಾಗಾದರೆ ತಾವು ಫೋಟೋ ತಂದು ಹಾಜರುಮಾಡುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆಂದು ನುಡಿಯತ್ತಾರೆ. ವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದಾಗ ನಾನು ಮತ್ತು 2 ನೇ ಪ್ರತಿವಾದಿ ವಾದಿಗೆ ತೊಂದರೆ ಕೊಟ್ಟಿದ್ದರಿಂದ ಆಕೆ ಸರಗೂರು ಪೋಲೀಸ್ ಠಾಣೆಗೆ ಹೋಗಿ ನಮ್ಮ ವಿರುದ್ಧ ದೂರು ಕೊಟ್ಟಿದ್ದಾರೆಂದರೆ ಸರಿಯಲ್ಲ. ಪೋಲೀಸರು ನಮ್ಮನ್ನು ಠಾಣೆಗೆ ಕರೆಸಿ ತೊಂದರೆ ಕೊಡಬಾರದೆಂದು ಮುಚ್ಚಳಿಕೆ ಬರೆಸಿರುತ್ತಾರೆಂದರೆ ಸರಿಯಲ್ಲ. ಪುನಃ ವಾದಿಯ ಸ್ವಾಧೀನಕ್ಕೆ ತೊಂದರೆ ವಾದಿಯು ನಮ್ಮ ವಿರುದ್ಧ ಇನ್ನೊಂದು ಪಿರ್ಯಾದು ದಾಖಲು ಮಾಡಿರುತ್ತಾರೆಂದರೆ ಸರಿಯಲ್ಲ. ವಾದಿಯ ಮಕ್ಕಳಾದ ರಮೇಶ ಮತ್ತು ಶ್ರೀನಿವಾಸರವರು

ದಾವಾ ಆಸ್ತಿಗೆ ಬಂದು ನನಗೆ ತೊಂದರೆ ಕೊಟ್ಟಿರುತ್ತಾರೆಂದು ಪೋಲೀಸ್ ಪಿರ್ಯಾದನ್ನು ಕೊಟ್ಟಿರುತ್ತೇವೆಂದು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಈ ಬಗ್ಗೆ ದಾಖಲೆ ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ನೆನಪಿಲ್ಲಾ ಎನ್ನುತ್ತಾರೆ. ಅಸಲು ದಾವಾ ನಂ. 31/2019 ದಾವೆಯಲ್ಲಿ ಈ ದಾವೆಯ ವಾದಿ ಮತ್ತು ಆ ದಾವೆಯಲ್ಲಿ ಪ್ರತಿವಾದಿಯಾದ ನಾಗಮ್ಮ ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ಆರ್.ಆರ್.ಟಿ. ಕೇಸು ದಾಖಲಾಗಿ ವಿಚಾರಣೆ ಆಗಿರುತ್ತದೆಂದು ತಾವು ಹೇಳಿದ್ದು, ಈ ಸಂಬಂಧ ದಾಖಲೆಗಳನ್ನು ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ವಾದಿಯೇ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭೋಗದಲ್ಲಿದ್ದು ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಾನು ದಾವಾ ಆಸ್ತಿಯಲ್ಲಿ ಸ್ವಾಧೀನ ಇಲ್ಲದಿದ್ದರೂ ಸ್ವಾಧೀನ ಇರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯ ಹೆಸರಿಗೆ ದಾವಾ ಆಸ್ತಿಯ ಕ್ರಯ ಪತ್ರ ಆಗ ದಿನದಿಂದಲೂ ವಾದಿಯೇ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುತ್ತಾರೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**C/c 1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**